[ **Govt. of Karnataka** **C.R.P. 67]**

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 573/2020**

ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 11

ಸಾಕ್ಷಿದಾರನ ಹೆಸರು : ಸದಾಶಿವ
ತಂದೆಯ ಹೆಸರು : ಮಿಂಜರೆ ಗೌಡ
ಪ್ರಾಯ : 52 ವರ್ಷ
ಉದ್ಯೋಗ : ಕೂಲಿ
ವಾಸ : ಕಬ್ಬಿನಾಲೆ

ದಿನಾಂಕ 19.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ಚಾಸಾ-1 ರವರ ಪರಿಚಯ ಇಲ್ಲ.

ಸುಮಾರು 5 ವರ್ಷಗಳ ಹಿಂದೆ ಪೊಲೀಸರು ಠಾಣೆಗೆ ಕರೆದು ಕೆಇಬಿ ಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿರುತ್ತಾನೆ ಆ ವಿಚಾರವಾಗಿ ಒಂದು ಸಹಿ ಹಾಕು ಎಂದು ಹೇಳಿ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಷದ್ರಿ ದಾಖಲೆಗೆ ನನ್ನೊಂದಿಗೆ ಚಾಸಾ-10 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ಘಟನಾ ಸ್ಥಳ ಮಹಜರು ಹಾಗೂ ಕರಡು ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಘಟನಾ ಸ್ಥಳ ಮಹಜರನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಕರಡು ನಕಾಶೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರು ಸಮಯ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದರನ್ನು ಈಗಾಗಲೇ ನಿಪಿ-1 ಮತ್ತು 2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-

ದಿಃ01.08.2019 ರಂದು ಕಬ್ಬಿನಾಲೆ ಗ್ರಾಮದ ಕುಚ್ಚೂರಿನ ಹಿಂಡು ಎಂಬಲ್ಲಿ ಚಾಸಾ-9 ರವರ ಮನೆಯ ಬಳಿ ಚಾಸಾ-1 ರವರು ತೋರಿಸಿಕೊಟ್ಟಂತೆ ನೀವು ಹಾಗೂ ಚಾಸಾ-10 ರವರ ಸಮಕ್ಷಮ ಪೊಲೀಸರು ನಿಪಿ-9 ರಂತೆ ಸ್ಥಳ ಮಹಜರು ಮಾಡಿ ನಿಪಿ-10 ರಂತೆ ನಕಾಶೆಯನ್ನು ತಯಾರಿಸಿ ನಿಪಿ-1 ಮತ್ತು 2 ರಂತೆ ಭಾವಚಿತ್ರ ತೆಗೆದು ಸ್ಥಳಲ್ಲಿಯೇ ನಿಮ್ಮಗಳ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ : ಶ್ರೀ ಪಿ ಎ ಎಸ್ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ